ಶ್ರೀ ಕೆ. ಎಲ್. ನರಸಿಂಹಯ್ಯ.—ಮೈದಾಳ ಕೆರೆಯ ನೀರಿನ ಹಂಚಿಕೆಯ ಬಗ್ಗೆ ಸರ್ಕಾರ ಎಕ್ಸ್‌ಪೈರಿ ಕಮಿಟಿ ಮಾಡಿದ್ದು ಯಾವ ತಾರೀಖಿನಲ್ಲಿ ?

†ಶ್ರೀ ಎಂ. ಎನ್. ನಾಗನೂರ್.—ಆ ಕಮಿಟಿಯನ್ನು ಜುಲೈ 1951ರಲ್ಲಿ ನೇಮಕಮಾಡಿದ್ದು.

ಶ್ರೀ ಕೆ. ಎಲ್. ನರಸಿಂಹಯ್ಯ.—ಆ ರೀತಿ 1951ರಲ್ಲಿ ಆ ಕಮಿಟಿಯನ್ನು ನೇಮಕ ಮಾಡಿದ್ದರೂ, ಇದುವರೆಗೆ ಸರ್ಕಾರ ಆ ಕಮಿಟಿಯ ವರದಿಯಮೇಲೆ ಏತಕ್ಕೆ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ ?

Sri M. N. NAGHNOOR.—This Committee has made some interim suggestions and they have been implemented. The Committee is due to submit its report.

†Sri H. M. CHANNABASAPPA.—Hon'ble Member is also a member of that Committee. There have been several resolutions passed by that Committee and they have made some suggestions. Those suggestions are being implemented. The Committee has not been able to take a final decision because some information required by the Committee has not been furnished.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಕಮಿಟಿಯ ವರದಿ ಸರ್ಕಾರಕ್ಕೆ ಸಂಪೂರ್ಣವಾಗಿ ಬಂದು ನಾಲ್ಕು ವರ್ಷಗಳಾಗಲಿಲ್ಲವೇ ?

ಶ್ರೀ ಎಂ. ಎನ್. ನಾಗನೂರ್.—ಇಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ನಾನೂ ಒಬ್ಬ ಆ ಕಮಿಟಿಯ ಸದಸ್ಯನಾಗಿದ್ದೇನೆ. ವರದಿಯನ್ನು ಪೂರ್ಣವಾಗಿ ಮಾಡಿ ಕಳುಹಿಸಿದ್ದೇನೆ. ಮಂತ್ರಿಗಳು ಬಂದಿಲ್ಲವೆಂದು ಹೇಳಿದರೆ, ಇನ್ನಾವರೀತಿ ಪ್ರಶ್ನೆ ಹಾಕಬೇಕು ?

Sri H. M. CHANNABASAPPA.—The Hon'ble Member is aware that the Committee has not finalised its proceedings.

ಶ್ರೀ ಕೆ. ಎಲ್. ನರಸಿಂಹಯ್ಯ.—ಆರು ವರ್ಷಗಳಿಂದ ಸರ್ಕಾರಕ್ಕೆ ಬೇಕಾದಂಥ ಮಾಹಿತಿಗಳನ್ನೆಲ್ಲಾ ಈ ಬಗ್ಗೆ ನೇಮಕವಾದ ಸಮಿತಿಯವರಿಂದ ತರಿಸಿಕೊಳ್ಳುತ್ತಿದ್ದರೂ, ಇನ್ನೂ ಇದುವರೆಗೆ ಯಾವ ತೀರ್ಮಾನವನ್ನೂ ಹೊರಡಿಸದಿರುವುದು ಯಾರ ಕರ್ತವ್ಯ ?

Sri H. M. CHANNABASAPPA.—Quite so. There is omission on the part of Government. But I only drew the attention of the member to the fact that the Committee has not finalised its proceedings yet.

———

Delay in the construction of the College Building at Tumkur.

*Q.—394. Sri K. L. NARASIMHAIAH (Hebbur).—

Will the Government be pleased to state :—

(*a*) the reasons for the delay in constructing the College building at Tumkur ;

(*b*) whether they are aware that classes are held at present between 8 A M. and 6 P.M. in shift system ?

A.—Sri ANNA RAO GANAMUKHI (Minister for Education).—

(*a*) The University Syndicate is yet to take a final decision on the proposal to construct the Tumkur College building.

(*b*) Yes. The College is working from 8 A.M. to 5-30 P.M.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರಿನಲ್ಲಿ ಕಾಲೇಜು ಪ್ರತಿ ದಿವಸ 8 ಗಂಟೆಯಿಂದ ಸಾಯಂಕಾಲ 5½ ಘಂಟೆಯವರೆಗೂ ಜಾಗವಿಲ್ಲದೆ ನಡೆಯುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಅಣ್ಣಾರಾವ್ ಗಣಮುಖಿ.—ಉತ್ತರದಲ್ಲಿಯೇ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಮಂತ್ರಿಗಳು ಎಷ್ಟೋಸಾರಿ ಅಲ್ಲಿಗೆ ಬಂದು ಕಾಲೇಜಿಗೆ ಸ್ಥಳ ಸಂಕೋಚವಾಗಿರುವುದನ್ನು ನೋಡಿದ್ದರೂ ಮತ್ತು ಕಾಲೇಜು ಕಟ್ಟಡ ಕಟ್ಟಿಸುವುದಕ್ಕೆ ಸುಮಾರು ಒಂದೂವರೆ ವರ್ಷಗಳ ಹಿಂದೆಯೇ ತೀರ್ಮಾನವಾಗಿದ್ದರೂ ಸರ್ಕಾರದವರು ಇನ್ನೂ ಏಕೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟದ್ದಾದ್ದರಿಂದ ಸರ್ಕಾರ ಇನ್ನೂ ಯಾವ ಕ್ರಮವನ್ನೂ ಆ ಬಗ್ಗೆ, ತೆಗೆದುಕೊಂಡಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಸರ್ಕಾರಕ್ಕೆ ಈ ವಿಷಯದಲ್ಲಿ ಬೇಕಾದಷ್ಟು ಮನವಿಗಳು ಬಂದಿದ್ದರೂ, ಏತಕ್ಕೋಸ್ಕರ ಅವರು ಒಂದೂವರೆ ವರ್ಷಗಳಿಂದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದೂವರೆ ವರ್ಷದಿಂದಲೇ ಅಲ್ಲ. 1949ರಲ್ಲಿ ಅಲ್ಲೊಂದು ಕಾಲೇಜು ಕಟ್ಟಡ ಕಟ್ಟಿಸಬೇಕೆಂದು ಫೌಂಡೇಷನ್ ಹಾಕಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಇಷ್ಟು ವರ್ಷಗಳಿಂದ ಅಲ್ಲಿಂದ ಮನವಿಗಳು ಬರುತ್ತಿದ್ದರೂ, ಮಂತ್ರಿಗಳು ಹದಿನಾರು ಸಾರಿ ಅಲ್ಲಿಗೆ ಟೂರ್ ಮಾಡಿದ್ದರೂ ಅಲ್ಲಿ ಅದರ ಅವಶ್ಯಕತೆ ಇದೆಯೆಂಬುದನ್ನು ಮನಗಂಡೂ ಏಕೆ ಇದುವರೆಗೆ ಇನ್ನೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ?